ಬರಲಿಲ್ಲ. ಅಲ್ಪಕಾಲಾವಧಿ ಪ್ರಶ್ನೆ ಬೆಂಗಳೂರು ನಗರದಲ್ಲಿ ಮಾರ್ಕೆಟ್ ಹತ್ತಿರ ಇರುವ ಸಬ್‌ವೇಗೆ ಸಂಬಂಧಪಟ್ಟದ್ದಾಗಿದೆ, ಈ ರೀತಿ ಆದರೆ ಏನು ಮಾಡುವುದು ?

ಉಪಸಭಾಪತಿಯವರು.—ತಾವು ಹೇಳಿತಕ್ಕ ವಿಚಾರಗಳನ್ನು ಸರ್ಕಾರದವರಿಗೆ ಆಗಾಗ್ಯೆ ತಿಳಿಸುತ್ತಾ ಇದ್ದೇವೆ.

ಶ್ರೀ ಬಿ. ಚನ್ನಬ್ಯೆರೇ ಗೌಡ.—ಉತ್ತರ ಬಂದರೆ ಒಳ್ಳೆಯದು. ಎರಿಕ್ಷಿಸಿಟಿ ಬೋರ್ಡಿನ ಮೇರೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಕೇಳಿದ್ದೆ ಅದೂ ಬರಲಿಲ್ಲ ಮತ್ತು, ಕಾವೇರಿ ಬೇಸಿನ್‌ನಲ್ಲಿ ಆಗಬೇಕಾದ ಕಾಂಗಾರಿಗಳ ವಿಷಯ ಇದೆ, ಅದರ ಚರ್ಚೆ ಯಾವಾಗ ಬರುತ್ತದೆ ?

Debate on the sharing of the Cauvery Waters—Permission for allowance

Sri C. S. BALAKRISHNA GOWDA.—To-day I have given notice of a special resolution regarding Cauvery waters. It is a very important matter affecting millions of people. The four districts in that basin will be affected if proper steps are not taken with regard to this matter. Therefore, kindly allow us to have a free and frank discussion on this subject.

ಉಪಸಭಾಪತಿಯವರು.—ಈ ವಿಚಾರಗಳೆಲ್ಲಾ ಬಹಳ ಪ್ರಾಮುಖ್ಯವಾದುವು. ಆದರೆ ಕಾಲಾವಕಾಶವಿಲ್ಲ. ಇವತ್ತು ನಾಳೆ ಬಹಳ ಕೆಲಸ ಇದೆ, ವಿರೋಧಪಕ್ಷದ ಸದಸ್ಯರು ಮತ್ತು ಇತರ ಮಾನ್ಯ ಸದಸ್ಯರೆಲ್ಲರೂ ಸಹಕರಿಸಿ ಆದಷ್ಟು ಬೇಗ ಅಫಿಷಿಯಲ್ ಬಿಸಿನೆಸ್ ಎಲ್ಲವನ್ನೂ ಮುಗಿಸಿದರೆ ಯೋಚನೆ ಮಾಡಬಹುದು. The Hon. Leader of the House is requested to consider whether this subject can be taken up at any time to-day or at least tomorrow. The Chair is requesting the Leader of the House to consider this matter.

ಶ್ರೀ ಜಿ. ವಿ. ಅಂಜನಪ್ಪ.—ವಿರೋಧ ಪಕ್ಷದವರು ಯಾವಾಗಲೂ ಸಹಕರಿಸುತ್ತಾ ಇದ್ದಾರೆ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕಾವೇರಿ ವ್ಯಾಲಯಲ್ಲಿ ಆಗಬೇಕಾದ ಪ್ರಾಜೆಕ್ಟುಗಳ ವಿಷಯವಾಗಿ ಮಾತನಾಡಬೇಕೆಂದಿರುವವರು ಅಲ್ಲಿಂದ ಬಂದಿರತಕ್ಕ ಅನೇಕ ಜನ ಸದಸ್ಯರು ಇರುವ ಪ್ರಯುಕ್ತ ಸಮಯ ಒದಗಿಸಲು ಸಭಾನಾಯಕರು ಒಪ್ಪಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಆಗಲೇ ಹೇಳಿದ್ದೇನೆ, ನಾಳೆ ನಮ್ಮ ಮುಂದೆ ಇರತಕ್ಕ ಎಲ್ಲಾ ಬಿಸಿನೆಸ್ಸನ್ನೂ ಮುಗಿಸಿ ಉಳಿದ ವೇಳೆಯನ್ನು ಅದಕ್ಕೆ ಕೊಡಬಹುದು.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಮಂಗಳವಾರ ದಿವಸವೂ ಕೂಡ ಸೇರಿ ಈ ಕೆಲಸಕಾರ್ಯಗಳನ್ನೆಲ್ಲಾ ಮುಗಿಸಬಹುದು.

ಶ್ರೀ ಸಿ. ಎಸ್ ಬಾಲಕೃಷ್ಣ ಗೌಡ.—ನಾಳೆ ಮುಗಿಸಬೇಕೆಂದು ಇದ್ದೀರಿ, ಒಪ್ಪೋಣ. ಅನಂತರ ಮೂರ ದಿವಸ ರಜಬರುತ್ತದೆ. ಆದ್ದರಿಂದ ಕೊನೇ ಪಕ್ಷ ನಾಳೆ ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತೂ ಕುಳಿತುಕೊಂಡು ಈ ವಿಚಾರವನ್ನು ಚರ್ಚೆ ಮಾಡಬಹುದು, ಎಷ್ಟೇ ತೊಂದರೆ ಇದ್ದರೂ ಇಂತಹ ಗಹನವಾದ ವಿಷಯದಲ್ಲಿ ಬೆಳಿಗ್ಗೆ ಮಧ್ಯಾನ್ನ ಕುಳಿತುಕೊಂಡು ಚರ್ಚೆ ಮಾಡುವುದು ಒಳ್ಳೆಯದು.

ಉಪಸಭಾಪತಿಯವರು.—ಮಾನ್ಯ ಸಭಾನಾಯಕರು ಒಪ್ಪಿಕೊಂಡಿರುವುದು ಬಹಳ ಮೆಚ್ಚತಕ್ಕ ವಿಚಾರ. ಅಜೆಂಡಾದಲ್ಲಿರತಕ್ಕ ಎಲ್ಲಾ ವಿಷಯಗಳನ್ನೂ ಆದಷ್ಟು ಬೇಗ ಮುಗಿಸಬೇಕು. ನಂತರ ನಾಳೆ ಬೆಳಿಗ್ಗೆ ಎಂಟೂವರೆ ಗಂಟೆಯಿಂದ ಮಧ್ಯಾಹ್ನ ಒಂದೂವರೆ ಗಂಟೆವರೆಗೆ ಅಥವಾ ಎರಡು ಗಂಟೆಯವರೆಗಾದರೂ ಕುಳಿತು ಈ ವಿಷಯವನ್ನು ಚರ್ಚೆ ಮಾಡಬಹುದು ಎಂದು ಕಾಣುತ್ತದೆ.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಬೆಂಗಳೂರಿನ ಮಾನ್ಯ ಸದಸ್ಯರಿಗೆ ನಾಳೆ ಬೆಳಿಗ್ಗೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಇದೆ, ಬಹಳ ಪ್ರಾಮುಖ್ಯವಾದ ವಿಷಯಗಳು ಇವೆ. ಆದ್ದರಿಂದ ಬೆಳಿಗ್ಗೆ ಬರುವುದಕ್ಕಾಗುವುದಿಲ್ಲ.

Police Excesses over the Students of the Bangalore University

ಶ್ರೀ ಜಿ. ವಿ. ಆಂಜನಪ್ಪ.—ನಾನು ಮಾನ್ಯ ಸಭಾಪತಿಗಳ ಮೂಲಕ ಸರ್ಕಾರದವರ ಗಮನಕ್ಕೆ ಒಂದು ಅತಿ ಮುಖ್ಯವಾದ ವಿಚಾರವನ್ನು ತರಬಯಸುತ್ತೇನೆ. ಅದೇನೆಂದರೆ : —

ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮುಷ್ಕರವನ್ನು ಹೂಡಿದ್ದ ಸಂದರ್ಭದಲ್ಲಿ ಪೋಲೀಸರು ಆ ವಿದ್ಯಾರ್ಥಿಗಳ ಮೇಲೆ ಕ್ರೂರವರ್ತನೆಗಳನ್ನು ನಡೆಸಿರುತ್ತಾರೆ. ಕಾಲೇಜುಗಳೆಲ್ಲಾ ಬಂದಾಗಿದ್ದರೂ ಅಲ್ಲಿ ಒಳಗೆ ಹೋಗಿ ರೈಬ್ರೆರಿಯಲ್ಲಿ ಓದಬೇಕೆಂಬ ವಿದ್ಯಾರ್ಥಿಗಳಿಗೂ ಮತ್ತು ಲ್ಯಾಬೊರೇಟರಿಗಳಲ್ಲಿ ರಿಸರ್ಚ್ ನಡೆಸತಕ್ಕ ವಿದ್ಯಾರ್ಥಿಗಳನ್ನು ಅಲ್ಲಿ ಪೋಲೀಸರು ಒಳಗಡೆಗೆ ಬಿಡುತ್ತಿಲ್ಲ. ಇದರಿಂದ ಆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಹುಡುಗರೆಲ್ಲಾ ಬಹಳ ಕಂಗಾಲಾಗಿದ್ದಾರೆ. ಪೋಲೀಸರಿಂದ ಅವರಿಗೆ ಆಗುತ್ತಿರುವ ಕಿರುಕುಳ ಅಷ್ಟಿಷ್ಟಲ್ಲ. ಆ ಗಂಗರಾಜ್ ಅನ್ನತಕ್ಕವನನ್ನೂ ಕೂಡ ಪೋಲೀಸರು ಅನೇಕ ತೊಂದರೆಗಳನ್ನು ಕೊಡುತ್ತಿದ್ದಾರೆ. ಪೋಲೀಸರ ಕಿರುಕುಳವನ್ನು ತಪ್ಪಿಸಿ ಅಲ್ಲಿ ಅಭ್ಯಾಸಕ್ಕೆ ಬರತಕ್ಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವುದಕ್ಕೆ ವ್ಯವಸ್ಥೆಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಈಗ ಕಾಲೇಜಿಗೆ ರಜವನ್ನು ಕೊಟ್ಟಿರುವುದರಿಂದ ಅಲ್ಲಿ ರೈಬ್ರೆರಿ ಮತ್ತು ಲ್ಯಾಬೋರೇಟರಿಗಳನ್ನು ಮುಚ್ಚಿರಾಗಿದೆ. ಇನ್ನು ಆಫೀಸಿಗೆ ಹೋಗತಕ್ಕವರಿಗೆ ಯಾರಿಗಾದರೂ ತೊಂದರೆಯಾಗಿದ್ದರೆ ವಿಚಾರ ಮಾಡೋಣ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನನ್ನ ಒಂದು ಷಾರ್ಟ್‌ನೋಟೀಸ್ ಪ್ರಶ್ನೆಗೆ ಇಲ್ಲಿಯವರೆಗೂ ಉತ್ತರವೇ ಬರಲಿಲ್ಲ. ಅದಕ್ಕೆ ಇದೇ ಸಕ್ರೆಟೇರಿಯಟ್‌ನಲ್ಲಿ ಉತ್ತರ ದೊರೆಯುತ್ತದೆ. ಬೇರೆ ಎಲ್ಲಿಗೂ ಅದನ್ನು ಕಳುಹಿಸಬೇಕಾಗಿಲ್ಲ. ಆದ್ದರಿಂದ ದಯವಿಟ್ಟು ಆ ಪ್ರಶ್ನೆಗೆ ನಾಳೆ ಸಾಧ್ಯವಾದರೆ ಉತ್ತರವನ್ನು ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೆ. ಸುಬ್ಬಯ್ಯ.—ನೆನ್ನೆಯ ದಿವಸ ಪೋಲೀಸಿನವರ ದೌರ್ಜನ್ಯದ ಬಗ್ಗೆ ಶ್ರೀ ಎ. ಎಚ್. ಶಿವಾನಂದಸ್ವಾಮಿಗಳು ಒಂದು ಸಲುವಳಿ ಸೂಚನೆಯನ್ನು ತಂದಿದ್ದರು. ಆದರ ಬಗ್ಗೆ ಅಧ್ಯಕ್ಷರು ಈ ದಿವಸ ರೂಲಿಂಗ್ ಕೊಡುವುದಾಗಿ ಹೇಳಿದ್ದರು. ಅದನ್ನು ಇನ್ನೂ ಕೊಟ್ಟಿಲ್ಲ. ದಯವಿಟ್ಟು ಅದರ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY CHAIRMAN.—The Chair is surprised to hear from the hon. Member that the Chair had not given any ruling yesterday on the point. For the information of the hon. Member, I may say that the Chair has ruled the motion out of order yesterday.

Papers laid on the Table

Mr. SECRETARY.—As required by Rule 100, I lay on the Table of the House the Mysore Silk Worm Seed Cocoon (Regulation, Production, Supply and Distribution) (Amendment) Bill, 1969, as passed by the Legislative Assembly. I lay on the Table of the House.